ಹಾರಂಗಿ ಜಲಾಶಯದ ಕಾಮಗಾರಿ

115(321) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾರಂಗಿ ಜಲಾಶಯದ ಕಾಮಗಾರಿ ಕೆಲಸ ಯಾವ ಹಂತದಲ್ಲಿದೆ;

ಆ) ಇದರ ಕಾಮಗಾರಿಯ ಗುತ್ತಿಗೆಯನ್ನು ಯಾರಿಗೆ ವಹಿಸಲಾಗಿತ್ತು; ಹಾಗೂ ಎಷ್ಟು ಮೊತ್ತದ ಕಾಮಗಾರಿ ನೀಡಲಾಗಿತ್ತು;

ಇ) ಸದರಿ ಕಾಮಗಾರಿಯ ಬಾಬ್ತು ಗುತ್ತಿಗೆಯ ಹಣವನ್ನು ಪಾವತಿಸದಿರುವ ವಿಚಾರ ನಿಜವೇ;

ಈ) ಈ ಬಾಕಿ ಹಣ ಬಿಡುಗಡೆಯಾಗದಿರಲು ಕಾರಣಗಳೇನು;

ಉ) ಗುತ್ತಿಗೆ ಬಾಕಿ ಹಣ ಬಿಡುಗಡೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಊ) ಕೊಡಗು ಜಿಲ್ಲೆಯಲ್ಲಿ ಒಟ್ಟು ಈ ರೀತಿಯ ಎಷ್ಟು ಕಾಮಗಾರಿಗಳ ಗುತ್ತಿಗೆ ಹಣ ಬಾಕಿ ಇದೆ; ಯಾವಾಗ ಪಾವತಿಸಲಾಗುವುದು; (ವಿವರಿಸುವುದು)

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಹಾರಂಗಿ ಜಲಾಶಯದ ಮೂಲ ಅಣೆಕಟ್ಟು ಕಾಮಗಾರಿಗಳನ್ನು 1982 ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ. ಅಣೆಕಟ್ಟಿನಲ್ಲಿ ನೀರನ್ನು ಶೇಖರಿಸಲಾಗುತ್ತಿದೆ.

ಆ) ಹಾರಂಗಿ ಜಲಾಶಯದ ಮೂಲ ಅಣೆಕಟ್ಟು ಕಾಮಗಾರಿಯನ್ನು ಮೆ; ಬಾಲಾಜಿ ಕನ್‌ಸ್ಟ್ರಕ್ಷನ್ ಗೇಟ್‌ಗಳ ಕಾಮಗಾರಿಯನ್ನು ಮೆ:ಸಿಕ್ಕಾ ಅಂಡ್ ಸಿಕ್ಕಾ ಹಾಗೂ ಮೆ: ತುಂಗಭದ್ರ ಸ್ಟೀಲ್ ಪ್ರಾಡಕ್ಟ್ಸ್ (ಲಿ) ಮತ್ತು ಮಣ್ಣು ಏರಿ ಕಾಮಗಾರಿಯನ್ನು ಮೆ: ನೇಟ್ಟುಪಡಂ ಕಂಪನಿಗಳಿಗೆ ವಹಿಸಲಾಗಿತ್ತು ಒಟ್ಟು ಮೊತ್ತ ರೂ. 10.97 ಕೋಟಿಗಳಾಗಿರುತ್ತದೆ.

ಇ) ಹಾರಂಗಿ ಅಣೆಕಟ್ಟಿನ ಮೂಲ ಕಾಮಗಾರಿಗೆ ಸಂಬಂಧಿಸಿದಂತೆ ಯಾವುದೇ ಹಣ ಪಾವತಿಸಬೇಕಾಗಿರುವುದಿಲ್ಲ.

ಈ) ಈ ಪ್ರಶ್ನೆ ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಉ) ಈ ಪ್ರಶ್ನೆ ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಊ) ಕೊಡಗು ಜಿಲ್ಲೆಯಲ್ಲಿ ಒಟ್ಟು ಹಾರಂಗಿ ಯೋಜನೆಗೆ ಸಂಬಂಧಿಸಿದಂತೆ ಅಭಿವೃದ್ಧಿ ಮತ್ತು ದುರಸ್ಥಿಯ 105 ಕಾಮಗಾರಿಗಳಿದ್ದು ಅದರ ಮೊತ್ತವು ರೂ. 81.45 ಲಕ್ಷ ಬಾಕಿ ಉಳಿದಿದ್ದು, ಜುಲೈ ತಿಂಗಳಲ್ಲಿ ಬಿಡುಗಡೆಯಾಗಿರುವ ಹಣದಲ್ಲಿ ಭಾಗಶಃ ಹಾಗೂ ಉಳಿದ ಹಣವನ್ನು ಹಂತ ಹಂತವಾಗಿ ಪಾವತಿಸಲಾಗುವುದು.

ತೀರ್ಥಹಳ್ಳಿ ಮಾಲತಿ ನದಿಗೆ ಅಣೆಕಟ್ಟು

117(163) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?